# ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

**ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 15-03-2021 ಪ್ರಶ್ನೆ ಸಂಖ್ಯೆ : 1035(1320)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಶಶಿಲ್ ಜಿ. ನಮೋಶಿ(ಶಿಕ್ಷಕರ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 15-03-2021

ಉತ್ತರಿಸುವ ಸಚಿವರು: ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ವಿಷಯ : ಪ್ರೌಢಶಾಲಾ ಶಿಕ್ಷಕರನ್ನು ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗೆ ಮುಂಬಡ್ತಿ ನೀಡುವ ಕುರಿತು

(ಅ) ಪ್ರೌಢಶಾಲಾ ಶಿಕ್ಷಕರಿಂದ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗೆ ಮುಂಬಡ್ತಿ ನೀಡಲು ಇರುವ ನಿಯಮಾವಳಿಗಳೇನು; (ವಿವರ ನೀಡುವುದು)

(ಆ) ಪ್ರೌಢಶಾಲಾ ಶಿಕ್ಷಕರಿಗೆ ಸುಮಾರು 10 ವರ್ಷಗಳಿಂದ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗೆ ಮುಂಬಡ್ತಿ ಪ್ರಕ್ರಿಯೆ ಮಾಡದಿರಲು ಕಾರಣಗಳೇನು;

(ಇ) ಸರ್ಕಾರಿ ಪ್ರೌಢ ಶಿಕ್ಷಕರಿಂದ ಉಪನ್ಯಾಸಕರ ಮುಂಬಡ್ತಿಗೆ ಇರುವ ನಿಯಮಗಳನ್ನು ಇನ್ನಿತರ ಶಿಕ್ಷಣ ಇಲಾಖೆಯ ವೃಂದಗಳಲ್ಲಿ ಅಳವಡಿಸದಿರಲು ಕಾರಣಗಳೇನು; ಅಳವಡಿಸಿದ್ದಲ್ಲಿ, ಯಾವ ವೃಂದಕ್ಕೆ ಯಾವ ಯಾವ ನಿಯಮಾವಳಿಗಳನ್ನು ಅಳವಡಿಸಲಾಗಿದೆ;

(ಈ) ಯಾವ ವರ್ಷದಲ್ಲಿ ಪ್ರೌಢಶಾಲಾ ಶಿಕ್ಷಕರು ನೇಮಕಾತಿ ಹೊಂದಿರುತ್ತಾರೆ ಹಾಗೂ ಅದೇ ವರ್ಷದಲ್ಲಿ ಚಾಲ್ತಿ ಇರುವ ಸಿ&ಆರ್ ನಿಯಮಗಳನ್ನು ಅಳವಡಿಸಿಲ್ಲದಿರುವುದಕ್ಕೆ ಕಾರಣಗಳೇನು?